ನಂ.ಎಲ್‌ಆರ್‌ಎಫ್.74:81-82.

ವಿಭಾಗಾಧಿಕಾರಿಯವರ ಕಛೇರಿ,
ಮೈಸೂರು ವಿಭಾಗ,
ಮೈಸೂರು 570 005, ದಿನಾಂಕ:4.11.1982.

## ಸುತ್ತೋಲೆ

ವಿಷಯ: ಭೂ ಸುಧಾರಣಾ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರ ತನಿಖೆ ಬಗ್ಗೆ.

ಉಲ್ಲೇಖ: ಸರ್ಕಾರಿ ಪತ್ರದ ನಂ.ರೆವಿ.45.ಎಲ್‌ಆರ್‌ಎಂ.(2) 81, ದಿನಾಂಕ 8:11-10-82.
2: ಸರ್ಕಾರಿ ಆದೇಶದ ನಂ.ರೆವಿ.45.ಎಲ್‌ಆರ್‌ಎಂ.(2) 81, ದಿನಾಂಕ 30.9.1982.

---

ಉಲ್ಲೇಖ(2)ರಲ್ಲಿನಂತೆ ಸರ್ಕಾರಿ ಆದೇಶದಲ್ಲಿ ಈ ವಿಭಾಗಕ್ಕೆ ಭೂ ಸುಧಾರಣೆ ಲೆಕ್ಕಗಳನ್ನು ತನಿಖೆ ಮಾಡಲು 10 ಜನ ಕಂದಾಯ ಲೆಕ್ಕಪರಿಶೋಧಕರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಸರ್ಕಾರದವರು ಉಲ್ಲೇಖ(2)ರ ಪತ್ರದಲ್ಲಿ ಭೂಸುಧಾರಣಾ ಕಾರ್ಯದ ಲೆಕ್ಕ ಪರಿಶೋಧನೆ ಮಾಡುವಾಗ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ತಿಳಿಸಿರುತ್ತಾರೆ.(ಪ್ರತಿಯನ್ನು ಲಗತ್ತಿಸಿದೆ) ಇದರ ಪ್ರಕಾರ ಕಂದಾಯ ಲೆಕ್ಕಪರಿಶೋಧಕರು ಈ ಕೆಳಕಂಡ ಕೆಲಸವನ್ನು ಮಾಡಬೇಕಾಗಿರುತ್ತದೆ.

(1) ಮಾಜಿ ಗೇಣಿದಾರರು ಸರ್ಕಾರಕ್ಕೆ ಸಲ್ಲಿಸಬೇಕಾದ ಪ್ರೀಮಿಯಂ ಮೊಬಲಗನ್ನು ನಿರ್ಧರಿಸಿರುವ ಕಡತಗಳನ್ನು ಪರಿಶೀಲಿಸುವುದು.

(2) ಮಾಜಿ ಭೂ ಮಾಲೀಕರಿಗೆ ಪರಿಹಾರ ಹಣವನ್ನು ಪಾವತಿ ಮಾಡಿರುವ ಕಡತಗಳನ್ನು ಪರಿಶೀಲಿಸುವುದು. ಸರ್ಕಾರಿ ಸುತ್ತೋಲೆ ರೀತ್ಯಾ ಹಣ ಪಾವತಿ ಮಾಡಲಾಗಿದೆಯೋ ಎಂಬುದನ್ನು ಸಹ ಪರಿಶೀಲಿಸುವುದು.

(3) ಹೆಚ್ಚುವರಿ ಭೂಮಿಯನ್ನು ಹಂಚುವಾಗ ಜಮೀನಿನ ಖರೀದಿ ಬೆಲೆಯನ್ನು ನಿಗದಿಪಡಿಸಿರುವ ಕಡತಗಳನ್ನು ಪರಿಶೀಲಿಸುವುದು.

2. ಮೇಲ್ಕಂಡ 3 ವಿಭಾಗಗಳ ಕಡತಗಳನ್ನು ಗ್ರಾಮಲೆಕ್ಕಗಳೊಡನೆ ಪರಿಶೀಲಿಸಿ ಪ್ರತಿ ಪ್ರಕರಣಗಳಲ್ಲಿಯೂ ನಿಗದಿಪಡಿಸಿರುವ ಪ್ರೀಮಿಯಂ ಹಣ ಪರಿಹಾರಧನ ಮತ್ತು ಖರೀದಿ ಬೆಲೆ ಕಾನೂನಿನಂತೆ ಸರಿಯಾಗಿದೆಯೋ ಎಂಬುದನ್ನು ಪರಿಶೀಲಿಸತಕ್ಕದ್ದು. ಪ್ರೀಮಿಯಂ ಮತ್ತು ಖರೀದಿ ಬೆಲೆ ವಸೂಲಾತಿಯಾಗಿರುವುದನ್ನು ನಿಗದಿಯಾದ ನಮೂನೆಯ ರಿಜಿಸ್ಟರಿನಲ್ಲಿ ದಾಖಲಾಗಿರುವುದನ್ನು ಸಹ ಪರಿಶೀಲಿಸತಕ್ಕದ್ದು. ಅಲ್ಲದೆ ಪರಿಹಾರ ಹಣ ಕೊಟ್ಟಿರುವುದು ಪಾವತಿಯಾಗಿದೆಯೋ ಎಂಬುದರ ಬಗ್ಗೆ ಖಜಾನೆ ಷೆಡ್ಯೂಲ್‌ಗಳೊಡನೆ ತಾಳೆ ನೋಡತಕ್ಕದ್ದು.

3. ಮಾಜಿ ಗೇಣಿದಾರರು ಸರ್ಕಾರಕ್ಕೆ ಪಾವತಿ ಮಾಡುವ ಪ್ರೀಮಿಯಂ ನಿರ್ಧರಿಸಿರುವ ಕಡತಗಳಲ್ಲೂ ಹಾಗೂ ಮಾಜಿ ಭೂ ಮಾಲೀಕರಿಗೆ ಪರಿಹಾರ ಧನ ಕೊಡಲು ನಿಗದಿಪಡಿಸಿರುವ ಕಡತಗಳಲ್ಲಿ ಭೂ ಕಂದಾಯದ ಜೊತೆಗೆ ಕರಗಳು ಸೇರಿಸಿ ಪ್ರೀಮಿಯಂ, ಪರಿಹಾರ ಧನ ನಿಗದಿಪಡಿಸಲಾಗಿದೆಯೋ ಎಂಬುದನ್ನು ಪರಿಶೀಲಿಸತಕ್ಕದ್ದು. ಕಾರಣ ಭೂ ಸುಧಾರಣಾ ಕಾಯಿದೆಯ ರೀತ್ಯಾ ಕೇವಲ ಜಮೀನಿನ ಭೂ ಕಂದಾಯ (ಅಂದರೆ ಇತರ ಕರಗಳನ್ನು ಬಿಟ್ಟು) ಮಾತ್ರ (ಪ್ರೀಮಿಯಂ : ಪರಿಹಾರ ಧನ ಪಾವತಿ ಮಾಡುವಾಗ) ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ.

4; ಕರ್ನಾಟಕ ಭೂ ಸುಧಾರಣಾ ಕಾಯಿದೆಯ ವಿಧಿ 47(1)ರ ಪ್ರಕಾರ ವಿಧವೆಯರು, ಸಣ್ಣ ಹಿಡುವಳಿದಾರರು : ಅಪ್ರಾಪ್ತ ವಯಸ್ಕರು ಅಂಗವಿಕಲರು ಮತಿಹೀನರು ಇತ್ಯಾದಿಯವರು ಜಮೀನಿನ ವಾರ್ಷಿಕ ಗೇಣಿನ 20 ರಷ್ಟು ಪರಿಹಾರ ಹಣವನ್ನು ಹೊಂದಲು ಅರ್ಹರಾಗಿರುತ್ತಾರೆ. ಇತರೆಯವರು 15 ರಷ್ಟು ಮಾತ್ರ ಪರಿಹಾರ ಹಣವನ್ನು ಹೊಂದಲು ಅರ್ಹರಾಗಿರುತ್ತಾರೆ. ಹಣ ಪಾವತಿ ಮಾಡಿರುವ ಕಡತಗಳನ್ನು ಪರಿಶೀಲಿಸುವಾಗ ವಿಧಿ 47(1)ರಲ್ಲಿ ನಮೂದಿಸಿರುವ ವರ್ಗದವರಿಗೆ ಬಿಟ್ಟು ಉಳಿದವರಿಗೂ ಸಹ ಏನಾದರೂ 20 ರಷ್ಟು ಹಣ ಪಾವತಿ ಮಾಡಲಾಗಿದೆಯೋ ಎಂಬುದನ್ನು ಪರಿಶೀಲಿಸುವುದು 'ಡಿ' ವರ್ಗದ ಜಮೀನನ್ನು ಬಿಟ್ಟು ಕಾರಣ 'ಡಿ' ವರ್ಗದ ಜಮೀನಿಗೆ ಎಲ್ಲಾರೂ 20 ರಷ್ಟು ಪರಿಹಾರ ಹಣವನ್ನು ಹೊಂದಲು ಅರ್ಹರಾಗಿರುತ್ತಾರೆ.

....2

ಹಾಗೂ 47(1) (3)ರ ಪ್ರಕಾರ ಪರಿಹಾರ ಧನವನ್ನು ಪಾವತಿ ಮಾಡುವಾಗ ಅವರು ಅರ್ಹರೇ ಎಂಬುದರ ಬಗ್ಗೆ ಸಲ್ಲಿಸಿರುವ ದಾಖಲಾತಿ ಪತ್ರಗಳ ನೈಜತೆಯನ್ನು ಪರಿಶೀಲಿಸಿ ಪರಿಹಾರ ಧನ ಕೊಡಲಾಗಿದೆಯೇ ಎಂಬುದನ್ನೂ ಸಹ ಪರಿಶೀಲಿಸುವುದು.

5. ಭೂ ಸುಧಾರಣಾ ಕಾಯಿದೆ ರೀತ್ಯಾ ವಿಶೇಷ ವರ್ಗಕ್ಕೆ ಸೇರಿದವರನ್ನು ಬಿಟ್ಟು ಉಳಿದವರು ಕೇವಲ 2,000 ರೂಗಳ ನಗದು ಧನ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ಒಬ್ಬನೇ ಜಮೀನುದಾರನಿಗೆ ಅನೇಕ ಗೇಣಿದಾರನಿದ್ದರೂ ಆತನು ಒಟ್ಟಿನಲ್ಲಿ 2,000 ರೂ ನಗದು ಪರಿಹಾರ ಧನವನ್ನು ಪಡೆಯಲು ಅರ್ಹನಾಗಿರುತ್ತಾನೆಯೇ ಹೊರತು ಪ್ರತಿಯೊಂದು ಪ್ರಕರಣದಲ್ಲಿ ಆತನು 2,000 ರೂಗಳನ್ನು ಪಡೆಯಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಪ್ರತಿಯೊಂದು ಪ್ರಕರಣದಲ್ಲಿ 2,000 ರೂಗಳನ್ನು ಕೊಟ್ಟಿದ್ದರೆ ಅದನ್ನು ಲೆಕ್ಕಪರಿಶೋಧಕರು ತಮ್ಮ ಆಡಿಟ್ ವರದಿಯಲ್ಲಿ ತೋರಿಸತಕ್ಕದ್ದು ಮತ್ತು ಹೆಚ್ಚಿಗೆ ಪಾವತಿ ಮಾಡಿರುವ ಹಣದ ವಸೂಲಾತಿಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚನೆ ಕೊಡತಕ್ಕದ್ದು.

6. ಜಿಲ್ಲಾಧಿಕಾರಿಯವರು : ವಿಶೇಷ ಜಿಲ್ಲಾಧಿಕಾರಿಯವರು ಮೇಲ್ಕಂಡ ವಿಷಯಗಳ ಬಗ್ಗೆ ಆಗಿಂದಾಗ್ಗೆ ಸರ್ಕಾರದಿಂದ ಬಂದಿರುವ ಸುತ್ತೋಲೆಗಳ ನಕಲುಗಳನ್ನು ಕಂದಾಯ ಲೆಕ್ಕ ಪರಿಶೋಧಕರಿಗೆ ಕೊಡತಕ್ಕದ್ದು. ಇದಲ್ಲದೆ ಮೇಲ್ಕಂಡ ವಿಷಯಗಳಲ್ಲಿ ಏನಾದರೂ ನ್ಯೂನತೆಗಳು ಇದ್ದರೆ ಕರ್ನಾಟಕ ಭೂ ಸುಧಾರಣಾ ಕಾಯಿದೆಯ 118ರ ಪ್ರಕಾರ ಸಂಬಂಧಪಟ್ಟ ಉಪವಿಭಾಗಾಧಿಕಾರಿಯವರಿಗೆ ಅಪೀಲು ಅರ್ಜಿಯನ್ನು ಸಲ್ಲಿಸಲು ಅಥವಾ 118-ಎ ಪ್ರಕಾರ ವಿಭಾಗಾಧಿಕಾರಿಯವರಿಗೆ ಪರಿಷ್ಕರಣ ಮನವಿ ತಯಾರಿಸಲು ಕಂದಾಯ ಲೆಕ್ಕ ಪರಿಶೋಧಕರು ಮೂರು ತಿಂಗಳಲ್ಲಿಯೇ ಕ್ರಮ ಕೈಗೊಳ್ಳತಕ್ಕದ್ದು. ಕಂದಾಯ ಲೆಕ್ಕಪರಿಶೋಧಕರೆ ಸ್ವತಃ ಅಪೀಲು : ಪರಿಷ್ಕರಣ ಅರ್ಜಿ ತಯಾರಿಸಿ ಸಂಬಂಧಪಟ್ಟವರಿಗೆ ಸಲ್ಲಿಸತಕ್ಕದ್ದು ಮತ್ತು ತಯಾರಿಸುವಾಗ ಯಾವುದೇ ವಿಳಂಬ ಮಾಡಕೂಡದು.

7. ಜಿಲ್ಲಾಧಿಕಾರಿಯವರು : ವಿಶೇಷ ಜಿಲ್ಲಾಧಿಕಾರಿಯವರು ಪ್ರತಿ ತಿಂಗಳು ಕಂದಾಯ ಲೆಕ್ಕ ಪರಿಶೋಧಕರ ಕಾರ್ಯವನ್ನು ಸಮೀಕ್ಷಿಸತಕ್ಕದ್ದು ಮತ್ತು ಅವರು ಸಾಧಿಸಿರುವ ಪ್ರಗತಿ ತಃಖ್ತೆಯನ್ನು ಪ್ರತಿ ಮಾಹೆಯ 5 ರೊಳಗೆ ಈ ಕಾರ್ಯಾಲಯಕ್ಕೆ ಕಳುಹಿಸ ತಕ್ಕದ್ದು. ಇದಲ್ಲದೆ ಪರಿಹಾರ ಧನ ಪಾವತಿ ಮಾಡುವಾಗ ಯಾರಾದರೂ ತಪ್ಪು ಮಾಡಿದ್ದರೆ ಅಥವಾ ಸರ್ಕಾರದ ಸುತ್ತೋಲೆಗಳಿಗೆ ವಿರುದ್ಧವಾಗಿ ಧನ ಪಾವತಿ ಮಾಡಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲೂ ಸಹ ಸೂಚಿಸಿದೆ.

ಸಹಿ-(ಎಂ.ಬಿ.ಪ್ರಕಾಶ್),
ವಿಭಾಗಾಧಿಕಾರಿ,
ಮೈಸೂರು ವಿಭಾಗ.

ನಕಲನ್ನು ಕಂದಾಯ ಆಯುಕ್ತರು ಮತ್ತು ಕಾರ್ಯದರ್ಶಿಗಳು, ಕಂದಾಯ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಅವಗಾಹನೆಗೆ.

ಈ ಕೆಳಕಂಡವರಿಗೆ ತಿಳುವಳಿಕೆ ಮತ್ತು ಅಗತ್ಯ ಕ್ರಮದ ಬಗ್ಗೆ :

1) ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳು : ವಿಶೇಷ ಜಿಲ್ಲಾಧಿಕಾರಿಗಳು : ಉಪವಿಭಾಗಾಧಿಕಾರಿಗಳು : ತಹಸೀಲ್ದಾರರು ಮತ್ತು ವಿಶೇಷ ತಹಸೀಲ್ದಾರರುಗಳು.
2) ಎಲ್ಲಾ ಕಂದಾಯ ಲೆಕ್ಕಪರಿಶೋಧಕರಿಗೆ ತಿಳುವಳಿಕೆ ಹಾಗೂ ಪ್ರತಿ ಮಾಹೆ ಪ್ರಗತಿ ತಃಖ್ತೆಯನ್ನು ಈ ಕಾರ್ಯಾಲಯಕ್ಕೆ 5ನೇ ತಾರೀಖಿನೊಳಗೆ ಕಳುಹಿಸಲು ಸೂಚಿಸಿದೆ.

ವಿಭಾಗಾಧಿಕಾರಿಯವರ ಪರವಾಗಿ,
ಮೈಸೂರು ವಿಭಾಗ.

7/11/82